Indian Journal of History and Archaeology

ISSN (E):2582-225X
VOL-2, ISSUE -1, MAY-JUNE, 2020, 01-05

# ಸ್ವಾತಂತ್ರ್ಯ ಚಳುವಳಿಯಲ್ಲಿ ಟಿ.ಆರ್.ಚೆನ್ನಿಗರಾಮಯ್ಯರವರ ಪಾತ್ರ

ಡಾ. ಬಿಳಿಗಿರಿ ಎನ್

ಡಾ. ಬಿಳಿಗಿರಿ ಎನ್
ಅತಿಥಿ ಉಪನ್ಯಾಸಕರು
ಇತಿಹಾಸ ಅಧ್ಯಯನ ವಿಭಾಗ

ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ತುಮಕೂರು ಜಿಲ್ಲೆ ವಹಿಸಿದ ಪಾತ್ರ ಚಿರಸ್ಮರಣೀಯ. ಜಿಲ್ಲೆಯಲ್ಲಿ ಸುಮಾರು ಆರುನೂರಕ್ಕೂ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರಿದ್ದು, ಗಾಂಧೀಜಿಯವರು ತಂದಂತಹ ಅಸಹಕಾರ ಚಳುವಳಿ, ನಾಗರೀಕ ಕಾನೂನುಭಂಗ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿ ತಮ್ಮ ತನುಮನಗಳನ್ನು ಬಲಿದಾನ ಮಾಡಿದ್ದಾರೆ. ಅವರಲ್ಲಿ ಮಾಲಿ ಮರಿಯಪ್ಪ, ಆರ್.ಚೆನ್ನಿಗರಾಮಯ್ಯ, ಆರ್.ಎಸ್. ಆರಾಧ್ಯ, ಕೆ ನಂಜುಂಡರಾವ್ ಮುಂತಾದವರು ಭಾಗವಹಿಸಿದ್ದಾರೆ. ಹಳೇ ಮೈಸೂರು ಸಂಸ್ಥಾನದಲ್ಲಿ ಒಂದಾದ ತುಮಕೂರು ಜಿಲ್ಲೆಯು ಮೈಸೂರು ಮತ್ತು ಬೆಂಗಳೂರು ನಗರಗಳೆರಡನ್ನು ಬಿಟ್ಟರೆ ಇಡೀ ರಾಜ್ಯಕ್ಕೆ ಒಳ್ಳೆಯ ರಾಜಕೀಯ ಪ್ರಜ್ಞೆಯಿಂದಕೂಡಿತ್ತು. ಕೆ.ರಂಗಯ್ಯಂಗಾರ್ ಮುಂದಾಳತ್ವದಲ್ಲಿ 1921–22 ರಂದು ತುಮಕೂರು ಜಿಲ್ಲಾ ಕಾಂಗ್ರೇಸ್ ಅಸ್ತಿತ್ವಕ್ಕೆ ಬಂದು ಜಿಲ್ಲೆಯಲ್ಲಿ ಖಾದಿ, ಸ್ವದೇಶಿ, ಪಾನ ನೀರೋಧ, ದಲಿತರಅಭಿವೃದ್ಧಿ, ಹಿಂದಿ ಪ್ರಚಾರ, ಗೋ ಸಂರಕ್ಷಣೆ ಮುಂತಾದರಚನಾತ್ಮಕ ಕಾರ್ಯಕ್ರಮಗಳು ಯಶಸ್ವಿಯಾದವು. ಕೆ.ರಂಗಯ್ಯಂಗಾರ್ "ಮೈಸೂರುಕ್ರಾನಿಕಲ್" ಎಂಬ ಪತ್ರಿಕೆಯನ್ನು ನಡೆಸಿ ಜನತೆಯಲ್ಲಿ ಸ್ವಾತಂತ್ರ್ಯ ಬೀಜವನ್ನು ಬಿತ್ತಿದರು.[1]

ಮಹಾತ್ಮ ಗಾಂಧೀಜಿಯವರು 1927ರಲ್ಲಿ ತುಮಕೂರಿಗೆ ಭೇಟಿ ನೀಡಿದರು. ಇದು ಈ ಭಾಗದ ಜನತೆಯ ಮೇಲೆ ಮಹತ್ತರ ಪ್ರಭಾವ ಬೀರಿ ಹೆಚ್ಚು ಹೆಚ್ಚು ರಾಷ್ಟ್ರೀಯ ಚಟುವಟಿಕೆಯಲ್ಲಿ ತೊಡಗಲು ಸಾಧ್ಯವಾಯಿತು.

1934ರಲ್ಲಿ ಗಾಂಧೀಜಿಯವರು ತುಮಕೂರಿಗೆ 2ನೇ ಬಾರಿಗೆ ಪಾದಾರ್ಪಣೆ ಮಾಡಿದರ ಪರಿಣಾಮವಾಗಿ ಜಿಲ್ಲೆಯಲ್ಲಿ ಖಾದಿ, ಸ್ವದೇಶಿ, ಗ್ರಾಮಕೈಗಾರಿಕೆ, ಪಾನನಿರೋಧ, ಹರಿಜನೋದ್ಧಾರ ಚಳುವಳಿಗಳು, ಗೋಸಂರಕ್ಷಣೆ ಹಿಂದಿ ಪ್ರಚಾರ, ಕೋಮು ಸೌಹಾರ್ದತೆ ಇಂತಹ ರಚನಾತ್ಮಕ ಕಾರ್ಯಕ್ರಮಗಳು ಚಳುವಳಿಯಲ್ಲಿ ಸುಧಾರಣೆಯ ಅಂಗವಾಗಿ ಕಾರ್ಯರೂಪಕ್ಕೆ ಬಂದವು.[2] ಈ ಎಲ್ಲಾ ಹೋರಾಟಗಳಲ್ಲಿ ನಿಸ್ವಾರ್ಥ ಸೇವಾ ಮನೋಭಾವದಿಂದ ಜಾತಿ, ಭೇದ, ಮತ ಮರೆತು ಜನತೆ ಒಂದುಗೂಡಿ ಹೋರಾಡಿದರು. ಈ ಎಲ್ಲಾ ಹೋರಾಟಗಳಲ್ಲಿ ದಲಿತರು ಕೂಡ ಭಾಗವಹಿಸಿ ತಮ್ಮ ತನು, ಮನ, ಪ್ರಾಣಗಳನ್ನು ನೀಡಿದ್ದಾರೆ. ಅಂತಹವರಲ್ಲಿ ಟಿ.ಆರ್.ಚೆನ್ನಿಗರಾಮಯ್ಯರವರು ಒಬ್ಬರು. ಇವರು ಕೊರಟಗೆರೆಯಲ್ಲಿ 4-6-1911ರಲ್ಲಿ ಆದಿಕರ್ನಾಟಕ ಜನಾಂಗದ ಯಜಮಾನರಾಗಿದ್ದ ರಾಮಹನುಮಂತಯ್ಯನವರ ಏಕಮಾತ್ರ ಪುತ್ರ. ಸ್ವಂತ ಊರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಕೆಲಕಾಲ ವ್ಯವಸಾಯ ನಿರತರಾಗಿದ್ದ ಚೆನ್ನಿಗರಾಮಯ್ಯ ಮುಂದೆ 1929ರಲ್ಲಿ ಬೆಂಗಳೂರು ಕೋಟೆ ಹೈಸ್ಕೂಲು ಸೇರಿ1931ರಲ್ಲಿ ಖಖಖಅ ವ್ಯಾಸಂಗ ಮಾಡಿದರು. ನಂತರ ಅವರ ಶಾಲಾ ವಿದ್ಯಾಭ್ಯಾಸ ಮುಗಿಯಿತು. ಮುಂದೆ ಆರ್ಥಿಕ ಸಂಕಷ್ಟಗಳಿಂದಾಗಿ ಉನ್ನತ ಶಿಕ್ಷಣ ದೊರೆಯದಾಯಿತು. ಮೈಸೂರು ರಾಜ್ಯ ಜನಗಣತಿ ಇಲಾಖೆಯಲ್ಲಿ ಮೂರು ತಿಂಗಳು ಗುಮಾಸ್ತರಾಗಿ ಕೆಲಸಮಾಡಿ, ಮುಂದೆಅದೇ ವರ್ಷ ಗಾಂಧೀಜಿಯವರ ವಿಚಾರಗಳಿಂದ ಪ್ರಭಾವಿತರಾಗಿ ನೌಕರಿ ತ್ಯಜಿಸಿ ಕೊರಟಗೆರೆಯಲ್ಲಿ ಸಾರ್ವಜನಿಕರಂಗಕ್ಕೆ ಕಾಲಿಟ್ಟರು.[3] ಗಾಂಧೀಜಿಯವರ ಸ್ವಾತಂತ್ರ್ಯದ ರಣಕಹಳೆ ಅವರ ಸತ್ಯಾಗ್ರಹದ ಚಳುವಳಿಗಳು ಹಾಗೂ ಅಂಬೇಡ್ಕರ್ ಅವರ ಅಸ್ಪೃಶ್ಯತೆಯ ನಿವಾರಣೆಗಾಗಿ ನಡೆಸಿದ ಹೋರಾಟಗಳಿಂದ ಪ್ರಭಾವಿತರಾದರು. ಗಾಂಧೀಜಿಯವರು ತುಮಕೂರಿನ ದಲಿತರ ಕೇರಿಗಳಿಗೆ ಭೇಟಿ ನೀಡಿಪಾನ ನಿರೋಧ, ಅಸ್ಪೃಶ್ಯತಾ ನಿವಾರಣೆ, ಮುಂತಾದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಾಗ ಅದನ್ನು ಕಂಡಂತಹ ಚೆನ್ನಿಗರಾಮಯ್ಯ ದಲಿತರ ಸಂಕಷ್ಟಗಳನ್ನು ಬಗೆಹರಿಸಲು ಪಣತೊಟ್ಟರು. ನಂತರ ಗಾಂಧೀಜಿಯವರು 1927ರಲ್ಲಿ ಖಾದಿ ಪ್ರವಾಸವನ್ನು ತುಮಕೂರಿನಲ್ಲಿ ಕೈಗೊಂಡು ಅನೇಕ ಖಾದಿ ಕೇಂದ್ರಗಳನ್ನು ತೆರೆದು ಖಾದಿ ತೊಡಿ ವಿದೇಶಿ ಬಿಡಿ ಎಂಬ ಘೋಷಣೆಗಳಿಂದ ಖಾದಿ ಬಳಕೆಯನ್ನು ವ್ಯಾಪಕಗೊಳಿಸಿದರು. ಮುಂದೆ ಮಲಿಮರಿಯಪ್ಪ ಮತ್ತು ಚೆನ್ನಿಗರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಚರಕಾ ಪ್ರಾರಂಭೋತ್ಸವ ನಡೆಯಿತು. ಮೈಸೂರು ಸರ್ಕಾರದ ಆಸಕ್ತಿಯಿಂದ ಖಾದಿ ಹೆಚ್ಚು ಹೆಚ್ಚು ಯಶಸ್ವಿಯಾಯಿತು. ಹಾಗೆಯೇ ಗಾಂಧೀಜಿಯವರ ಪ್ರಭಾವದಿಂದ ಸಂಪೂರ್ಣ ಖಾದಿದಾರಿಗಳಾಗಿದ್ದು ಇಡಿ ಜಿಲ್ಲೆಯಾದ್ಯಂತ ಸಂಚರಿಸಿ ದಲಿತ ಸಮುದಾಯದಲ್ಲಿ ಜಾಗೃತಿ ಉಂಟುಮಾಡಿದರು. ನಂತರಗೋ ಸಂರಕ್ಷಣೆಗೆ ಹೆಚ್ಚಿನ ಮಹತ್ವವನ್ನು ನೀಡಿಕೆ.ರಂಗಯ್ಯಂಗಾರ್, ಎಸ್.ಕಾಮರಾಜಪ್ಪ, ಹೆಚ್.ಎಂ, ಗಂಗಾಧರಯ್ಯ, ಚೆನ್ನಿಗರಾಮಯ್ಯ,

ರಂಗಯ್ಯಂಗಾರ್, ಕೆ.ಎಸ್.ರಾಜಪ್ಪನವರು ಗೋ ಸಂರಕ್ಷಣಾ ಕಾರ್ಯದಲ್ಲಿ ತೊಡಗಿ 1926ರಲ್ಲಿ ಪ್ರಾಣಿದಯಾ ಪ್ರಚಾರ ಸಂಘವನ್ನು ತುಮಕೂರಿನಲ್ಲಿ ಸ್ಥಾಪಿಸಿದರು. ಗಾಂಧೀಜಿಯವರು ತಂದಂತಹ ಅಸ್ಪೃಶ್ಯತಾ ನಿವಾರಣೆಯಲ್ಲಿ ಚೆನ್ನಿಗರಾಮಯ್ಯರವರು ತೊಡಗಿಸಿಕೊಂಡು ದಲಿತ ಕೇರಿಗಳಿಗೆ ಭೇಟಿ ನೀಡಿ ಮಧ್ಯಪಾನ ನಿಲ್ಲಿಸಬೇಕು, ಸ್ವಚ್ಚತೆಯಿಂದಇರಬೇಕು ದೇವದಾಸಿ ಪದ್ಧತಿ, ಬಾಲ್ಯ ವಿವಾಹ ಮುಂತಾದವುಗಳನ್ನು ತ್ಯಜಿಸುವಂತೆ ಮತ್ತು ಸುಶಿಕ್ಷಿತರಾಗುವಂತೆ ಕರೆ ನೀಡಿದರು. ಹಾಗೂ ಮಾಲಿಮರಿಯಪ್ಪ, ಸಿ.ಟಿ ಹನುಮಂತಯ್ಯರ ಮುಂತಾದ ನಾಯಕರನ್ನು ಆಹ್ವಾನಿಸಿ ಉಪನ್ಯಾಸ ಏರ್ಪಡಿಸುತ್ತಿದ್ದರು.[4] ನಂತರಮೈಸೂರುರಾಜ್ಯ ಆದಿ ಜಾಂಬವಾಭಿವೃದ್ಧಿ ಸಂಘ ಸ್ಥಾಪಿಸಿ ಅದರ ಕಾರ್ಯದರ್ಶಿ ಚಿಕ್ಕ ಹನುಮಂತಯ್ಯನವರೊಡನೆ ರಾಜ್ಯದಲ್ಲಿ ಹರಿಜನ ಸಂಘಟನೆ ನಡೆಸಿದರು. 1932ರಲ್ಲಿ ಹರಿಜನರನ್ನು ಸಂಘಟಿಸಿ ಜಿಲ್ಲೆಯಲ್ಲಿ ದೇವಸ್ಥಾನ ಪ್ರವೇಶ ಚಳುವಳಿಯನ್ನು ನಡೆಸಿದರು. ಹರಿಜನರ ದೇವಾಲಯ ಪ್ರವೇಶ, ಸಹಪಂಕ್ತಿ ಭೋಜನ ಮತ್ತು ಪಾನನಿರೋಧ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 1934ರಲ್ಲಿ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಬಾಪೂಜಿ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆಯನ್ನು ಮಹಾತ್ಮ ಗಾಂಧೀಜಿಯವರು ನೆರವೇರಿಸಿದರು. ಇವರು 1936ರಲ್ಲಿ ಮೈಸೂರು ಹರಿಜನ ಸೇವಕ ಸಂಘದ ಪ್ರತಿನಿಧಿಯಾಗಿ ದೆಹಲಿ ಮತ್ತು ಕಲ್ಕತ್ತಕ್ಕೆ ತೆರಳಿ ಬಾಪೂಜಿ ಅವರನ್ನು ಮತ್ತು ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ Joint Electorate with Reservation of Seats to Harijans. ತತ್ವಕ್ಕೆ ಬೆಂಬಲ ಸೂಚಿಸಿ ಗಾಂಧೀಜಿಯವರ ಮೆಚ್ಚುಗೆಗೆ ಪಾತ್ರರಾದರು.[5]

ಕ್ವಿಟ್ ಇಂಡಿಯಾ ಚಳುವಳಿಯು ತುಮಕೂರಿನಲ್ಲಿ ನಡೆದಾಗ ಆಗಸ್ಟ್ 15ರಂದು ಒಂದು ಸಾರ್ವಜನಿಕ ಮೆರವಣಿಗೆ ನಡೆಯಿತು ಇದರಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು, ನೌಕರರು, ದಲಿತರು ಮತ್ತು ಮಹಿಳೆಯರು ಕೂಡ ಭಾಗವಹಿಸಿದರು. ಇವರು ಪಟ್ಟಣದ ಬೀದಿ ಬೀದಿಗಳಲ್ಲಿ ಬ್ರಿಟಿಷರೇ ಭಾರತ ಬಿಟ್ಟುತೊಲಗಿ ಎಂಬ ಘೋಷಣೆಗಳೊಂದಿಗೆ ಮೆರವಣಿಗೆ ಹೊರಟರು. ಈ ಮೆರವಣಿಗೆಯಲ್ಲಿ ಕಾಂಗ್ರೇಸ್ ಮುಖಂಡರಾದ ಕೆ.ಭೀಮಯ್ಯ, ಎಂ.ವಿ ರಾಮರಾವ್, ಆರ್.ಎನ್. ಆರಾದ್ಯ ಅವರ ಜೊತ ಚೆನ್ನಿಗರಾಮಯ್ಯರವರು ಭಾಗವಹಿಸಿ ಈಚಲು ಮರಕಡಿಯುವುದು, ಸರ್ಕಾರಿ ಕಛೇರಿಗಳ ಮೇಲೆ ಧ್ವಜಾರೋಹಣ, ರೈಲುಗಾರಿಗಳನ್ನು ಭಸ್ಮ ಮಾಡುವುದು, ಅಂಚೆ ತಂತಿಗಳನ್ನು ಕೀಳುವುದು ಮುಂತಾದ ಚಟುವಟಿಕೆಯಲ್ಲಿ ತೊಡಗಿ ಕೊರಟಗೆರೆಯ ತಾಲೂಕಿನ ಹಳ್ಳಿಹಳ್ಳಿಗಳಲ್ಲಿ ಪ್ರಚಾರ ಸಭೆ ನಡೆಸಿ ತಾಲೂಕು ಕಛೇರಿಯ ಮೇಲೆ ತ್ರಿವರ್ಣಧ್ವಜ ಹಾರಿಸಿದರು. ನಂತರ 'ಕೊರಟಗೆರೆಯಲ್ಲಿ ದಸ್ತಗಿರಿಯಾಗಿ ಬೆಂಗಳೂರಿನ ಸೆಂಟ್ರಲ್‌ಜೈಲಿನಲ್ಲಿ ಒಂದೂವರೆ ತಿಂಗಳು ಶಿಕ್ಷೆ ಅನುಭವಿಸಿದರು. ಅಲ್ಲಿ ಇವರ ಆರೋಗ್ಯ ಕೆಟ್ಟಿದ್ದರಿಂದ ಕ್ಷಮಾಪಣೆ ಬರೆದುಕೊಟ್ಟು ಮನೆಗೆ ತೆರಳುವಂತೆ ಅನೇಕ ಮಿತ್ರರೂ ಒತ್ತಾಯಿಸಿದರೂ ಇವರು ಹಾಗೆ

ಮಾಡದೆ ನಾನು ಸ್ವಾತಂತ್ರ್ಯ ಹೋರಾಟಕ್ಕಾಗಿ ಬಂದಿರುವೆ, ಸ್ವಾತಂತ್ರ್ಯ ಸಿಗುವ ತನಕ ಹೋಗುವುದಿಲ್ಲ. ಜೈಲಿನಲ್ಲೆ ದೇಶಕ್ಕೋಸ್ಕರ ಪ್ರಾಣ ಬಿಡಲು ಸಿದ್ಧನಾಗಿ ಇದ್ದೇನೆಎಂದು ಹೇಳಿದರು, ಜೈಲಿನಿಂದ ಸರ್ಕಾರತನಾಗಿ ಬಿಡುಗಡೆ ಮಡುವ ತನಕ ಅನಾರೋಗ್ಯ ಸಹಿಸಿ ಜೈಲಿನಲ್ಲಿ ಉಳಿದರು.[6] ಮೈಸೂರು ಚಲೋ ಚಳುವಳಿಯು ಸಂಸ್ಥಾನದಲ್ಲಿ ತನ್ನದೇ ಆದ ಬೆಳವಣಿಗೆಯನ್ನು ಪಡೆದುಕೊಂಡಿತು ತುಮಕೂರಿನಲ್ಲೂ ಹೆಚ್ಚು ಪ್ರಭಾವ ಬೀರಿ ಇಲ್ಲಿನ ಕಾಂಗ್ರೇಸ್ ಮುಂಖಡರಾದ ಡಿ.ಎಸ್ ಮಲ್ಲಪ್ಪರವರು ಪ್ರಜಾಮಿತ್ರ ಮಂಡಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು ನಂತರ ಮೂರನೇ ಅಧಿವೇಶನ ತುಮಕೂರಿನಲ್ಲಿ ನಡೆದಾಗ ಕೆ ರಂಗಯ್ಯಂಗಾರ್, ಬಿ.ಸಿ ನಂಜುಂಡಪ್ಪ, ಆರ್. ಚೆನ್ನಿಗರಾಮಯ್ಯ ಮುಂತಾದ ನಾಯಕರು ಒಗ್ಗಟ್ಟಿನಿಂದ ವ್ಯವಸ್ಥಿತವಾಗಿ ಸಂಘಟಿಸಿದರು. ಚೆನ್ನಿಗರಾಮಯ್ಯರವರು ಜವಾಬ್ದಾರಿ ಸರ್ಕಾರಕ್ಕೆ ಬೆಂಬಲ ನೀಡುತ್ತಾ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದರು. ನಂತರ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದಾಗ ಕರ್ನಾಟಕ ರಾಜ್ಯ ಮೊಟ್ಟಮೊದಲ ಕೆ.ಸಿ.ರೆಡ್ಡಿ ಅವರ ಸಂಪುಟದಲ್ಲಿ ಏಳು ಮಂದಿ ಕ್ಯಾಬಿನೆಟ್ ದರ್ಜೆಯ ಪ್ರಥಮ ದಲಿತ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದರು. ಸ್ಥಳೀಯ ಸಂಸ್ಥೆಗಳು, ಅರಣ್ಯಖಾತೆ ಮತ್ತು ಸಮಾಜಕಲ್ಯಾಣ, ಶಿಕ್ಷಣಖಾತೆ ಸಚಿವರಾಗಿ ಪ್ರಮಾಣಿಕತೆಯಿಂದಲೂ ಸೇವೆ ಸಲ್ಲಿಸಿದರು.[7]

ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಬೇರೂರಿ ಬಂದಿರುವ ಜಾತಿ, ಮತ, ಸ್ಪೃಶ್ಯ, ಅಸ್ಪೃಶ್ಯವೆಂಬ ಮೇಲು ಕೀಳು ಕಳಂಕವನ್ನು ಹೋಗಲಾಡಿಸಿ ಜಾತ್ಯಾತೀತ ಸಮಾಜ ಸೃಷ್ಟಿಸಲು ಶ್ರಮಿಸಿದರು. ಈ ಜನಾಂಗಕ್ಕೆ ಸರ್ಕಾರದಿಂದ ದೊರೆಯುವಂತಹ ಎಲ್ಲಾ ರೀತಿಯ ಸವಲತ್ತುಗಳನ್ನು ದೊರಕಿಸಿಕೊಡುವಲ್ಲಿ ಪ್ರಮಾಣಿಕ ಪ್ರಯತ್ನ ಮಾಡಿದರು. ಹೀಗೆ ಸರಳ ಸಜ್ಜನಿಕೆ ಪ್ರಮಾಣಿಕ ವ್ಯಕ್ತಿಯಾಗಿ ಕಾಂಗ್ರೆಸಿನಲ್ಲಿ ಗಾಂಧೀಜಿಯವರ ಬೆಂಬಲದೊಂದಿಗೆ ಹಲವಾರು ರಚನಾತ್ಮಕ ಕಾರ್ಯಕ್ರಮ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹರಿಜನರ ಉದ್ದಾರಕ್ಕಾಗಿ ಹಲವಾರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕಾರ್ಯಕ್ರಮಗಳನ್ನು ಕೈಗೊಂಡು ದಲಿತರ ಏಳಿಗೆಗಾಗಿ ಶ್ರಮಿಸಿದರು ಶ್ರೀಯುತರು ಜನವರಿ 21, 1976ರಲ್ಲಿ ನಿಧನರಾದರು.[8]

*ISSN (E):2582-225X,* VOL-2, ISSUE-1, JAN-FEB, 2020, 01-05

**ಅಡಿ ಟಿಪ್ಪಣಿಗಳು**


1. ಕವಿತಾ ಕೃಷ್ಣ(ಸಂ), ಜಯಮಂಗಲಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2002.
2. ನಾಗರಾಜ್.ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ), ಇತಿಹಾಸ ದರ್ಶನ, ಸಂಪುಟ–18, ಕರ್ನಾಟಕ ಇತಿಹಾಸ ಅಕಾಡೆಮಿ(ರಿ), ಬೆಂಗಳೂರು, 2003.
3. ಸೂರ್ಯನಾಥ್‌ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ–03, ಗೀತಾ ಬುಕ್ ಹೌಸ್, ಮೈಸೂರು, 1977.
4. ನಾಗರಾಜ್.ಎಂ,ಜಿ, ಕೃಷ್ಣಮೂರ್ತಿ ಪಿ.ವಿ(ಸಂ), ಪೂರ್ವೋಕ್ತ, 2003.
5. ನಾಗರತ್ನಮ್ಮ, ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ, ದೇಶಿ ಪುಸ್ತಕ ಮಾಲೆ ಬೆಂಗಳೂರು, 2009.
6. ಸೂರ್ಯನಾಥ್‌ಕಾಮತ್, ಕರ್ನಾಟಕದಲ್ಲಿ ಕ್ವಿಟ್‌ಇಂಡಿಯಾ ಚಳುವಳಿ, ಲೋಕ ಶಿಕ್ಷಣ ಗ್ರಂಥಮಾಲೆ, ಹುಬ್ಬಳ್ಳಿ, 1992.
7. ಕವಿತಾ ಕೃಷ್ಣ, ಸ್ವಾತಂತ್ರ್ಯ ಶ್ರೀ, ಕವಿತಾ ಪ್ರಕಾಶನ, ತುಮಕೂರು, 1990.
8. ಎನ್.ಚಿನ್ನಸ್ವಾಮಿ ಸೋಸಲೆ, ನಾಲ್ವಡಿ ಕೃಷ್ಣರಾಜ ಒಡೆಯರಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 2013.